**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಸಕಲೇಶಪುರ**
**C.C.No.2/2023**

| | | |
|---|---|---|
| **ಹೆಸರುಃ** | **ಕೆ ಆರ್ ಪ್ರದೀಪ** | **CW-7** |
| **ತಂದೆ/ಗಂಡ ಹೆಸರುಃ** | **ಲೇಟ್ ರಂಗೇಗೌಡ** | **PW-6** |
| **ವಯಸ್ಸುಃ** | **35 ವರ್ಷ** | |
| **ವೃತ್ತಿಃ** | **ಗ್ರಾಮ ಆಡಳಿತಾಧಿಕಾರಿ** | |
| **ವಿಳಾಸಃ** | **ಆಲೂರು** | **ದಿನಾಂಕಃ 19.01.2026** |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದ.**

ನಾನು 2022 ರಿಂದ 2023 ರವರಗೆ ದೇವನದಕೆರೆ ವಿಭಾಗದಲ್ಲಿ ಗ್ರಾಮ ಲೆಕ್ಕಿಗನಾಗಿ ಕಾರ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ಗ್ರಾಮಾಂತರ ಠಾಣಾ ಉಪನೀರಿಕ್ಷಕರು ರವಿ ಬಿನ್ ನಿಂಗೇಗೌಡ, ರವರ ಹೆಸರಿನಲ್ಲಿ ಇರುವ ಆಸ್ತಿಯ ಖಾತಾ ನಕಲನ್ನು ಕೋರಿ ಪತ್ರ ಬರೆದಿರುತ್ತಾರೆ. ಆಪ್ರಕಾರ ನಾನು ಲೇಡ್ಜರ ಖಾತೆಯನ್ನು ನೀಡಿರುತ್ತೇನೆ. ಸಾಕ್ಷಿಯು ಲೇಡ್ಜರ ಖಾತೆಯ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 5 ಎಂದು, ಸಹಿಯನ್ನು ನಿ ಪಿ 5 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ ಕೆ ವಕೀಲರಿಂದಃ**

ಖಾತ ನಕಲನ್ನು ಕೇಳಿ ಲಿಖಿತ ಪತ್ರ ನೀಡಿರುತ್ತಾರೆ. ನಿಪಿ 5 ರ ಜೊತೆ ಪಹಣಿ ಕೇಳಿರುವುದಿಲ್ಲ. ನಿ ಪಿ 5 ಆಸ್ತಿಯಲ್ಲಿ ಕಾಫಿ ಇರುತ್ತದೆ. ಸ ನಂ 117 ಖುಷಿ ಜಮೀನು ಆಗಿದ್ದು, ಅದರಲ್ಲಿ ಯಾವ ಬೆಳೆ ಬೇಕಾದರೂ ಬೆಳೆಯಬಹುದು. ಆ ಜಮೀನಿನಲ್ಲಿ ಭತ್ತ ಬೆಳೆಯಲು ಆಗುವುದಿಲ್ಲ. ಪೊಲೀಸರಿಗೆ ಸಹಾಯ ಮಾಡಲು ಬೇರೆ ಯಾವುದೋ ದಾಖಲೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೆ ಕೇ ಸ ಇ**

ಸಹಿ/–

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ**
**ಸಕಲೇಶಪುರ**